ಕೋವಿಡ್ ಕೇರ್ ಕಂಪಾನಿಯನ್



# ಮನೆಯಲ್ಲಿ ಪ್ರತ್ಯೇಕವಾಗಿರುವುದು

## ಮನೆಯಲ್ಲಿ ಪ್ರತ್ಯೇಕವಾಗಿರುವ **ಕೋವಿಡ್-19 ಸೋಂಕಿತ** ರೋಗಿಗಳಿಗೆ ಮಾರ್ಗಸೂಚಿಗಳು

ತುರ್ತುಪರಿಸ್ಥಿತಿ ಅಥವಾ ಯಾವುದೇ ಮಾಹಿತಿಗಾಗಿ
ನಿಮ್ಮ ಆಸ್ಪತ್ರೆ ಅಥವಾ **ಸಹಾಯವಾಣಿ 1075**

NOORAHEALTH

YosAID INNOVATION FOUNDATION

# ಮೊದಲು ವೈದ್ಯರನ್ನು ಸಂಪರ್ಕಿಸಿ




**ನೀವು ಬಳಸಬಹುದಾದ ಸಹಾಯವಾಣಿಗಳು**

ಸಹಾಯವಾಣಿ : **1075**

ಇ-ಸಂಜೀವಿನಿ : **91-11-23978046**

# ನೀವು ಮನೆಯಲ್ಲಿ ತೆಗೆದುಕೊಳ್ಳಬಹುದಾದ ಔಷಧಿಗಳು



**ನಿಮಗೆ ಜ್ವರ ಅಥವಾ ಮೈಕೈ ನೋವು ಇದ್ದರೆ:** ಆಹಾರದ ನಂತರ ಪ್ಯಾರೆಸಿಟಮಾಲ್ ಮಾತ್ರೆ 500 ಮಿಗ್ರಾಂ ದಿನಕ್ಕೆ 4 ಬಾರಿ 5 ದಿನಗಳವರೆಗೆ ತೆಗೆದುಕೊಳ್ಳಿ (2 ಡೋಸ್‌ಗಳ ನಡುವೆ 6 ಗಂಟೆಗಳ ಅಂತರವಿರಲಿ)

**ನಿಮಗೆ ಕೆಮ್ಮು** ಇದ್ದರೆ ಚೀಪುವ ಮಾತ್ರೆ ತೆಗೆದುಕೊಳ್ಳಿ.

**ನಿಮಗೆ ಅತಿಸಾರ ಇದ್ದರೆ,** ಒಆರ್ ಎಸ್ ಕುಡಿಯಿರಿ

**ಸ್ವಲ್ಪ ಅಥವಾ ಮಧ್ಯಮ ರೋಗಲಕ್ಷಣ ಇರುವವರು:** ಬುಡೆನೊಸ್ಸೈಡ್ 400 ಎಂಸಿಜಿ ಇನ್ಹೇಲರ್ ತೆಗೆದುಕೊಳ್ಳಬಹುದು. **5 ರಿಂದ 7 ದಿನಗಳವರೆಗೆ ಪ್ರತಿದಿನ ಎರಡು ಬಾರಿ 2 ಪಫ್ಸ್, ತೆಗೆದುಕೊಳ್ಳಬೇಕು.** ಬೇಗನೇ ತೆಗೆದುಕೊಂಡರೆ ಪರಿಣಾಮಕಾರಿ. ಡಾಕ್ಟರ್ ನ್ನು ಸಂಪರ್ಕಿಸಿ

# ಪ್ರತ್ಯೇಕವಾಗಿ ಇರಿ







**ನಿಮಗೆ ಯಾವುದೇ ರೋಗ ಲಕ್ಷಣಗಳು ಇಲ್ಲದಿದ್ದರೂ,** ಶೌಚಾಲಯವಿರುವ ಪ್ರತ್ಯೇಕ ಕೋಣೆಯಲ್ಲಿ ಇರಿ

**ಯಾವುದಕ್ಕೂ ಕೋಣೆಯನ್ನು ಬಿಟ್ಟು ಬರಬೇಡಿ**

ಹಾಸಿಗೆ, ಟವೆಲ್, ಪ್ಲೇಟ್, ಲೋಟಾ, ಕಪ್, ಚಮಚಗಳು, ಫೋನ್‌ಗಳು ಮುಂತಾದ ವೈಯಕ್ತಿಕ ವಸ್ತುಗಳನ್ನು **ಹಂಚಿಕೊಳ್ಳಬೇಡಿ**

# ಆಹಾರ ಮತ್ತು ನೀರು



- ಆರೈಕೆದಾರರು **ಆಹಾರವನ್ನು** ರೋಗಿ ಇರುವ **ಕೋಣೆಯ ಹೊರಗೆ ಇಡಬೇಕು**
- ಸ್ಥಳೀಯವಾಗಿ ಲಭ್ಯವಿರುವ **ಹಣ್ಣುಗಳು ಮತ್ತು ತರಕಾರಿಗಳನ್ನು** ನೀಡಿ. ಬೇಳೆ, ಹಾಲು, ಸೋಯಾ, ಪನೀರ್, ಮೊಟ್ಟೆ ಮತ್ತು ಇತರ ಪ್ರೋಟೀನ್ ಭರಿತ ಆಹಾರವನ್ನು ಸೇವಿಸಿ
- ದಿನಕ್ಕೆ 8-10 ಗ್ಲಾಸ್ **ನೀರು** ಕುಡಿಯಿರಿ

# ಆಕ್ಸಿಜನ್ ಮಟ್ಟವನ್ನು ಸುಧಾರಿಸಲು



ಆರಾಮದಾಯಕವಾಗಿದ್ದರೆ, ದಿನಕ್ಕೆ ಮೂರು ಬಾರಿ 30 ನಿಮಿಷದಿಂದ 1 ಗಂಟೆಯವರೆಗೆ ನಿಮ್ಮ **ಹೊಟ್ಟೆ ಕೆಳಗೆ ಮಾಡಿ ಮಲಗಿಕೊಳ್ಳಿ**

ರಕ್ತದೊತ್ತಡ(ಬಿ.ಪಿ), ಹೃದಯ ಸಮಸ್ಯೆ, ಬೆನ್ನು ಮೂಳೆಯ ಸಮಸ್ಯೆ ಗರ್ಭಿಣಿಯಾಗಿದ್ದರೆ, ಮತ್ತು ಊಟದ ನಂತರ **ಮಾಡಬೇಡಿ**

# ಚೇತರಿಸಿಕೊಳ್ಳಲು



ದಿನಕ್ಕೆ ಮೂರು ಬಾರಿ ಬೆಚ್ಚಗಿನ ಉಪ್ಪುನೀರಿನಲ್ಲಿ **ಮುಕ್ಕಳಿಸಿ (ಗಾರ್ಗಲ್ ಮಾಡಿ)**



ದಿನಕ್ಕೆ ಮೂರು ಬಾರಿ **ಹಬೆ** ತೆಗೆದುಕೊಳ್ಳಿ



**ದೀರ್ಘ ಉಸಿರಾಟದ ವ್ಯಾಯಾಮ** ಮಾಡಿ

# ನಿಮ್ಮ ಆರೋಗ್ಯವನ್ನು ನೋಡಿಕೊಳ್ಳಿ



ಥರ್ಮಾಮೀಟರ್ ನಿಂದ ತಾಪಮಾನ ಮತ್ತು ಪಲ್ಸ್ ಆಕ್ಸಿಮೀಟರ್ ನಿಂದ ಆಕ್ಸಿಜನ್ ಮಟ್ಟ ಎರಡನ್ನೂ ದಿನಕ್ಕೆ ಮೂರು ಬಾರಿ ಪರೀಕ್ಷೆ ಮಾಡಿಕೊಳ್ಳಿ

# ನಾನು ಯಾವಾಗ ಡಾಕ್ಟರ್ ಗೆ ತೋರಿಸಬೇಕು?

ನಿಮ್ಮ ರೋಗಲಕ್ಷಣಗಳು **4 ದಿನಗಳಿಗಿಂತ ಹೆಚ್ಚು ಕಾಲ ಇದ್ದರೆ ಅಥವಾ ಹದಗೆಡುತ್ತಿದ್ದರೆ** - ನಿಮಗೆ ಹೆಚ್ಚಿನ ಔಷಧಿಗಳು ಬೇಕಾಗಬಹುದು

# ನಾನು ಯಾವಾಗ ಆಸ್ಪತ್ರೆಗೆ ಹೋಗಬೇಕು?



### ಹೀಗೆ ಆದಾಗ

- ನಿಮಗೆ ಉಸಿರಾಟದ ತೊಂದರೆ ಇದ್ದರೆ, ವೇಗವಾಗಿ ಉಸಿರಾಡುತ್ತಿದ್ದರೆ
- ಎದೆನೋವು ಅಥವಾ ಎದೆಭಾರಎನಿಸಿದರೆ
- ಮೂರ್ಛೆ, ತಲೆತಿರುಗುವಿಕೆ, ಅರೆನಿದ್ರಾವಸ್ಥೆ ಮಾನಸಿಕ ಗೊಂದಲ

### ಪಲ್ಸ್ ಆಕ್ಸಿಮೀಟರ್ ಮಟ್ಟ

- 93 ಕ್ಕಿಂತ ಕಡಿಮೆ (ಆದರೆ 90 ಕ್ಕಿಂತ ಹೆಚ್ಚು) ಆದರೆ, **ಆಕ್ಸಿಜನ್ ಸೌಲಭ್ಯ ಹೊಂದಿರುವ ಆಸ್ಪತ್ರೆಗೆ ಹೋಗಿ.** ಅದು ನಿಮ್ಮ ಹತ್ತಿರವಿರುವ ಕೋವಿಡ್ ಕೇಂದ್ರವೂ ಆಗಿರಬಹುದು
- 90 ಅಥವಾ ಅದಕ್ಕಿಂತ ಕಡಿಮೆ ಇದ್ದರೆ, **ಆಸ್ಪತ್ರೆಗೆ** ಹೋಗಿ

### ಪಲ್ಸ್ ಆಕ್ಸಿಮೀಟರ್ ಲಭ್ಯವಿಲ್ಲದಿದ್ದರೆ

- ನಡೆದಾಡುವಂತಹ ಸರಳಚಟುವಟಿಕೆಗಳನ್ನು ಮಾಡುವಾಗ ರೋಗಿಗೆ ಉಸಿರಾಡಲು ಕಷ್ಟವಾದರೆ, **ಸ್ವಲ್ಪ ಮಟ್ಟಿನ ಉಸಿರಾಟದ ತೊಂದರೆ ಇದೆ ಎಂದರ್ಥ**
- ರೋಗಿಯು ವಿಶ್ರಾಂತಿಯಲ್ಲಿರುವಾಗಉಸಿರಾಟದತೊಂದರೆ ಇದ್ದರೆ ಅಥವಾ ಒಂದೇಬಾರಿ ಒಂದು ವಾಕ್ಯವನ್ನು ಪೂರ್ಣಗೊಳಿಸಲು ಸಾಧ್ಯವಾಗದಿದ್ದರೆ, **ತೀವ್ರವಾದ ಉಸಿರಾಟದ ತೊಂದರೆ ಇರುತ್ತದೆ**

# ವಿಶೇಷ ಸ್ಥಿತಿಗಳು

### 60 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರಿಗೆ ಅಥವಾ ಮಧುಮೇಹ, ಹೃದ್ರೋಗ, ಶ್ವಾಸಕೋಶದ ಕಾಯಿಲೆಯಂತಹ ವೈದ್ಯಕೀಯ ಪರಿಸ್ಥಿತಿಗಳನ್ನು ಹೊಂದಿರುವವರಿಗೆ:



- ನೀವು **ಗಂಭೀರ/ಹೆಚ್ಚಿನ ಅನಾರೋಗ್ಯದ ಅಪಾಯದಲ್ಲಿದ್ದೀರಿ**
- ನೀವು ಮನೆಯಲ್ಲಿ ಪ್ರತ್ಯೇಕವಾಗಿರಬಹುದೇ ಎಂದು ತಿಳಿಯಲು **ವೈದ್ಯರನ್ನು ಸಂಪರ್ಕಿಸುವುದು**
- ನಿಮ್ಮ **ನಿಯಮಿತ ಔಷಧಿಗಳನ್ನು ಮುಂದುವರಿಸಿ**
- ಕಡಿಮೆ ಉಪ್ಪು, ಕಡಿಮೆ ಸಕ್ಕರೆ, ಕಡಿಮೆ ನೀರು ತೆಗೆದುಕೊಳ್ಳುವಂತಹ ಯಾವುದೇ
- **ಆಹಾರ ನಿರ್ಬಂಧಗಳನ್ನು** ನೀವು ಹೊಂದಿದ್ದರೆ - ಅವುಗಳನ್ನು **ಮುಂದುವರಿಸಿ**
- ಆರೈಕೆದಾರರು ಆಂಬ್ಯುಲೆನ್ಸ್, ಆಕ್ಸಿಜನ್ ಬೆಡ್ ಇರುವ ಆಸ್ಪತ್ರೆಗಳು ಮತ್ತು ಐಸಿಯು ಹೊಂದಿರುವ ಆಸ್ಪತ್ರೆಗಳಂತಹ **ಸ್ಥಳೀಯ ಸಂಪರ್ಕ ಸಂಖ್ಯೆಗಳನ್ನು ಇಟ್ಟುಕೊಂಡಿರಿ**

### ಗರ್ಭಿಣಿ ಮಹಿಳೆಯರಿಗೆ:



- ನೀವು **ಪ್ರತ್ಯೇಕತಾ ಅವಧಿಯನ್ನು** ಪೂರ್ಣಗೊಳಿಸಿದ **ನಂತರ** ನಿಮ್ಮ ನಿಯಮಿತ ಚೆಕ್‌ಅಪ್‌ಗೆ ಹೋಗಿ ಮತ್ತು ಟೆಟನಸ್ (ಟಿಟಿ) ಚುಚ್ಚುಮದ್ದನ್ನು ಪಡೆಯಿರಿ
- **ಕಬ್ಬಿಣಾಂಶ ಮತ್ತು ಕ್ಯಾಲ್ಷಿಯಂ** ಮಾತ್ರೆಗಳನ್ನು ತೆಗೆದುಕೊಳ್ಳುವುದನ್ನು ಮುಂದುವರಿಸಿ
- ನಿಮ್ಮ ವೈದ್ಯರು, ಎಎನ್‌ಎಂ ಅಥವಾ ಆಶಾ ಕಾರ್ಯಕರ್ತರೊಂದಿಗೆ **ಸಂಪರ್ಕದಲ್ಲಿರಿ**

# ಪಾಲನೆ ಮಾಡುವವರು ಮತ್ತು ಕುಟುಂಬದ ಉಳಿದ ಸದಸ್ಯರು ಸುರಕ್ಷಿತವಾಗಿರುವುದು ಹೇಗೆ?



## ಸಮರ್ಪಿತ ಆರೈಕೆದಾರ

- ಮಧುಮೇಹ, ಹೃದ್ರೋಗ ಅಥವಾ ಶ್ವಾಸಕೋಶದ ಕಾಯಿಲೆಯಂತಹ **ಯಾವುದೇ ಹಿಂದಿನ ಕಾಯಿಲೆಗಳಿಲ್ಲದಿರುವ,** 18 ರಿಂದ 60 ವರ್ಷ ವಯಸ್ಸಿನ ಒ**ಬ್ಬ ವಯಸ್ಕ ಮಾತ್ರ** ರೋಗಿಯನ್ನು ನೋಡಿಕೊಳ್ಳಬೇಕು



## ರೋಗಿಯು ಸ್ವಂತ ಕೋಣೆಯಲ್ಲಿಯೇ ಇರಬೇಕು

- ರೋಗಿಯು **ಒಂದು ಕೋಣೆಯಲ್ಲೇ** ಇರಬೇಕು ಬಾಗಿಲು ಮುಚ್ಚಿ, ಕಿಟಕಿಗಳನ್ನು ತೆರೆದಿಡಬೇಕು
- ಆರೈಕೆದಾರನನ್ನು ಹೊರತುಪಡಿಸಿ **ಯಾರೂ ಕೋಣೆಗೆ ಹೋಗಬಾರದು**
- ರೋಗಿಗಾಗಿ ನೀವು ಪ್ರತ್ಯೇಕ ಕೊಠಡಿ ಹೊಂದಿಲ್ಲದಿದ್ದರೆ, ಸರ್ಕಾರಿ ಸಹಾಯವಾಣಿಗೆ (1075) ಕರೆ ಮಾಡಿ, ಕೋವಿಡ್ ಆರೈಕೆ ಕೇಂದ್ರಕ್ಕೆ ಹೋಗಿ



## ಆರೈಕೆದಾರ ಮತ್ತು ಕುಟುಂಬದ ಸುರಕ್ಷತೆ

- ಮನೆಯಲ್ಲಿರುವ **ಎಲ್ಲಾ ಕಿಟಕಿಗಳನ್ನು ತೆರೆಯಿರಿ**
- ನೀವು ರೋಗಿಯನ್ನು ಮುಟ್ಟುತ್ತಿದ್ದರೆ ಅಥವಾ ಬಟ್ಟೆ ಮತ್ತು ಬೆಡ್‌ಶೀಟ್‌ಗಳನ್ನು ಸ್ವಚ್ಛಗೊಳಿಸುತ್ತಿದ್ದರೆ ರಬ್ಬರ್ ಗ್ಲೌಸ್ ಅಥವಾ ಬಳಸಿ ಬಿಸಾಡಬಹುದಾದ (ಒಂದು-ಬಾರಿ ಬಳುಸುವ) ಗ್ಲೌಸ್ ಗಳನ್ನು ಧರಿಸಿ
- **ಮನೆಯಲ್ಲಿ ಪ್ರತಿಯೊಬ್ಬರೂ ಮಾಸ್ಕ್ ಹಾಕಿಕೊಳ್ಳಬೇಕು.** ಆರೈಕೆ ಮಾಡುವವರು ಸರ್ಜಿಕಲ್ ಅಥವಾ ಎನ್ 95 ಮಾಸ್ಕ್ ನ್ನು ಹಾಕಬೇಕು. (N95 ಮಾಸ್ಕ್ ನ್ನು ಸಹ ಬಳಸಬಹುದು)
- ಯಾವುದೇ ಸೋಂಕುನಿವಾರಕ ದ್ರಾವಣವನ್ನು ಬಳಸಿ, **ಮನೆಯನ್ನು, ವಿಶೇಷವಾಗಿ, ಸಾಮಾನ್ಯವಾಗಿ ಬಳಸುವ ವಸ್ತುಗಳನ್ನು ಸ್ವಚ್ಛವಾಗಿರಿಸಿಕೊಳ್ಳಿ**



## ಎಲ್ಲರೂ ಮನೆಯೊಳಗೆ ಇರಬೇಕು

- ನಿಮ್ಮ ರೋಗಲಕ್ಷಣಗಳು ಪ್ರಾರಂಭವಾದಾಗಿನಿಂದ ಅಥವಾ ನೀವು ರೋಗಲಕ್ಷಣಗಳನ್ನು ಹೊಂದಿಲ್ಲದಿದ್ದರೂ ಪರೀಕ್ಷೆಯ ದಿನಾಂಕದಿಂದ ಕನಿಷ್ಠ 10 ದಿನಗಳ ಪ್ರತ್ಯೇಕ ಅವಧಿ ಮುಗಿಯುವವರೆಗೂ ಪ್ರತಿಯೊಬ್ಬರೂ ಮನೆಯೊಳಗೆ ಇರಬೇಕು. ಇದರ ಜೊತೆಗೆ ಕಳೆದ 3 ದಿನಗಳಿಂದ ಜ್ವರ ಇರಬಾರದು
- ನಿಮಗೆ ಅಗತ್ಯವಾದ ವಸ್ತುಗಳು, ದಿನಸಿ ಮತ್ತು ಔಷಧಿಗಳನ್ನು ತಂದು ಬಾಗಿಲಿನ ಬಳಿ ಇಡುವಂತೆ ನೆರೆಹೊರೆಯವರು ಮತ್ತು ಸ್ನೇಹಿತರನ್ನು ಕೇಳಿ **ಸಹಾಯ ಪಡೆಯಿರಿ**



## ಯಾವುದೇ ರೋಗಲಕ್ಷಣಗಳಿಗಾಗಿ ಪ್ರತಿಯೊಬ್ಬರನ್ನು ಮೇಲ್ವಿಚಾರಣೆ ಮಾಡಿ

- ಕುಟುಂಬದಲ್ಲಿ ಯಾರಾದರೂ ಯಾವುದೇ ರೋಗಲಕ್ಷಣಗಳನ್ನು ಹೊಂದಿದ್ದರೆ, **ವೈದ್ಯರನ್ನು / ಟೆಲಿಮೆಡೀಸಿನ್ ಸಹಾಯವಾಣಿಯನ್ನು ಸಂಪರ್ಕಿಸಿ**

# ನಾನು ಮನೆಯಲ್ಲಿ ಯಾವ ವಸ್ತುಗಳನ್ನು ಇಡಬೇಕು?

## ನೀವು ಕಿಟ್ ತಯಾರಿಸಿ ಮನೆಯಲ್ಲಿಯೇ ಇಟ್ಟುಕೊಳ್ಳಬಹುದು.

- 1 ಡಿಜಿಟಲ್ ಥರ್ಮಾಮೀಟರ್
- 1 ಪಲ್ಸ್ ಆಕ್ಸಿಮೀಟರ್
- 10 ಅಥವಾ ಹೆಚ್ಚಿನ ಸರ್ಜಿಕಲ್ ಮಾಸ್ಕ್ - ಗಳು (N95 ಮಾಸ್ಕ್ ನ್ನು ಬಳಸಬಹುದು)
- ಲಭ್ಯವಿದ್ದರೆ, ಆರೈಕೆದಾರರಿಗೆ N95 ಮಾಸ್ಕ್-ಗಳು
- 1 ಹ್ಯಾಂಡ್ ಸ್ಯಾನಿಟೈಜರ್ ಬಾಟಲ್
- ತಾಪಮಾನ ಮತ್ತು ಆಕ್ಸಿಜನ್ ಶುದ್ಧತ್ವವನ್ನು ಪ್ರತಿದಿನ ಬರೆಯಲು ಪುಸ್ತಕ
- ಪ್ಯಾರೆಸಿಟಮಾಲ್ 500 ಮಿಗ್ರಾಂನ 20 ಮಾತ್ರೆಗಳು
- ಕೆಮ್ಮಿಗೆ ಚೀಪುವ ಮಾತ್ರೆಗಳು



## ರೆಮ್ಡೆಸ್ವಿರ್, ಟೊಸಿಲಿಜುಮಾಬ್ ಮತ್ತು ಕನ್ವೆಲೆಸೆಂಟ್ ಪ್ಲಾಸ್ಮಾದಂತಹ ಇತರ ಔಷಧಿಗಳು ಯಾವುವು?

# ನಾನು ಯಾವಾಗ ಗಮನ ಹರಿಸಬೇಕು?

**ರೆಮ್ಡೆಸ್ವಿರ್** ಒಂದು ಆಂಟಿವೈರಲ್ ಔಷಧವಾಗಿದ್ದು ಅದು ರೋಗಲಕ್ಷಣಗಳ ಅವಧಿಯನ್ನು ಕಡಿಮೆ ಮಾಡುತ್ತದೆ. ಇದನ್ನು ಕೇವಲ ಆಕ್ಸಿಜನ್ ಚಿಕಿತ್ಸೆ ಅಡಿಯಲ್ಲಿ ಆಸ್ಪತ್ರೆಗೆ ದಾಖಲಾದ ರೋಗಿಗೆ ನೀಡಬಹುದು

**ಟೊಸಿಲಿಜುಮಾಬ್** ತೀವ್ರವಾದ ಕಾಯಿಲೆಯಿಂದ ಆಸ್ಪತ್ರೆಗೆ ದಾಖಲಾದ ರೋಗಿಗಳಿಗೆ ಮಾತ್ರ ನೀಡಬಹುದಾದ ಔಷಧವಾಗಿದೆ

**ಕನ್ವೆಲೆಸೆಂಟ್ ಪ್ಲಾಸ್ಮಾವನ್ನು** ಸಾಮಾನ್ಯವಾಗಿ ರೋಗಿಗಳಿಗೆ ಸೂಚಿಸಲಾಗುವುದಿಲ್ಲ

ವೈದ್ಯರ ಸೂಚನೆಯಿಲ್ಲದೆ ಈ ಔಷಧಿಗಳನ್ನು ಹುಡುಕಲು ಪ್ರಾರಂಭಿಸಬೇಡಿ

**ಇವುಗಳನ್ನು ನಿರ್ದಿಷ್ಟ ಸಂದರ್ಭಗಳಲ್ಲಿ ಮಾತ್ರ ಬಳಸಲಾಗುತ್ತದೆ**